ಅಪರ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.

**ಸಿ.ಸಿ. ಸಂಖ್ಯೆ: 490/2021**

ಫಿರ್ಯಾದಿದಾರ : ಎಸ್. ಶಂಕರ್ ಬಿನ್ ಶಿವಶೆಟ್ಟಿ
ವಯಸ್ಸು ಸುಮಾರು 52 ವರ್ಷಗಳು,
ವಾಸಃ # 247, 3 ನೇ ಕ್ರಾಸ್,
ಜಯಲಕ್ಷ್ಮೀಪುರಂ,
ಮೈಸೂರು ಜಿಲ್ಲೆ.

ವಿರುದ್ಧ,

ಆರೋಪಿ/ಗಳು : ಶ್ರೀಮತಿ ಎಂ. ಕೋಕಿಲ ಕೋಂ ಕೃಷ್ಣನಾಯಕ,
ವಯಸ್ಸು ಸುಮಾರು 40 ವರ್ಷಗಳು,
ವಾಸಃ ಶ್ರೀಕಾಂತ ಹೈಸ್ಕೂಲ್,
ಶಂಕರಮಠ ರಸ್ತೆ,
ಅಗ್ರಹಾರ,
ಮೈಸೂರು ನಗರ.

**ಆಪಾದನೆ**

ಆರೋಪಿಯಾದ ನೀವು 2020ರ ಸೆಪ್ಟೆಂಬರ್ ಮಾಹೆಯಲ್ಲಿ ಫಿರ್ಯಾದುದಾರರಿಂದ ಗೃಹಕೃತ್ಯದ ಸಲುವಾಗಿ ಹಾಗೂ ಕೈಸಾಲವನ್ನು ತೀರುವಳಿ ಮಾಡಲು ರೂ.1,50,000/- ಹಣವನ್ನು ಸಾಲವಾಗಿ ಪಡೆದು, ಸದರಿ ಸಾಲದ ಹಣವನ್ನು 3 ತಿಂಗಳೊಳಗಾಗಿ ಮರುಪಾವತಿಸಲು ಒಪ್ಪಿಕೊಂಡು, ಸದರಿ ಸಾಲದ ಹಣವನ್ನು ಮರುಪಾವತಿಸಲು 18-12-2020ರ ದಿನಾಂಕ ಇರುವ ರೂ.1,50,000/-ರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹುಣಸೂರು ಶಾಖೆಯ ಚೆಕ್ ಸಂಖ್ಯೆ - 855811 ಅನ್ನು ನೀಡಿದ್ದು, ಸದರಿ ಚೆಕ್ಕನ್ನು ಫಿರ್ಯಾದುದಾರರು ತಮ್ಮ ಬ್ಯಾಂಕ್ ಖಾತೆ ಇರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬಿಳಿಕೆರೆ ಶಾಖೆಗೆ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ, ಸದರಿ ಚೆಕ್ಕು **"Funds insufficient"** ಎಂಬ ಹಿಂಬರಹದೊಂದಿಗೆ ದಿಃ21-12-2020ರಂದು ವಾಪಾಸಾಗಿರುತ್ತದೆ. ಆದ್ದರಿಂದ ಫಿರ್ಯಾದುದಾರರು ತಮ್ಮ ವಕೀಲರ ಮುಖಾಂತರ ದಿಃ 20.01.2020ರಂದು ನೊಟೀಸನ್ನು ಕಳುಹಿಸಿದ್ದು, ಸದರಿ ನೋಟೀಸ್ ನಿಮಗೆ ದಿಃ 21.01.2021ರಂದು ಜಾರಿಯಾಗಿದ್ದರೂ ಸಹ ನೀವು ಇದುವರೆವಿಗೂ ಫಿರ್ಯಾದುದಾರರಿಗೆ ಚೆಕ್ಕಿನಲ್ಲಿ ನಮೂದಿಸಿದ ಹಣವನ್ನಾಗಲೀ ಅಥವಾ ಸದರಿ ನೋಟೀಸಿಗೆ ಪ್ರತ್ಯುತ್ತರವನ್ನಾಗಲೀ ನೀಡಿರುವುದಿಲ್ಲ. ಆದಕಾರಣ ನೀವು ಎನ್.ಐ ಆಕ್ಟ್ ಕಲಂ **138**ರಂತೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆಪಾದನೆ ಮಾಡಲಾಗಿದೆ.

ಮೇಲ್ಕಂಡ ಅಪರಾದವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುವುದರಿಂದ, ನೀವು ಈ ನ್ಯಾಯಾಲಯದ ವಿಚಾರಣೆಗೆ ಒಳಪಡುತ್ತೀರಿ.

ಪ್ರಶ್ನೆ **1. ಇದೀಗ ಓದಿ ವಿವರಿಸಿದ ಆಪಾದನೆ ನಿಮಗೆ ಅರ್ಥವಾಯಿತೆ?**

ಉತ್ತರಃ

ಪ್ರಶ್ನೆ **2. ಈ ಆಪಾದನೆಯ ಬಗ್ಗೆ ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಯಾವುದಾದರೂ ಪ್ರತಿ ರಕ್ಷಣೆ ಇದೆಯೇ?**

ಉತ್ತರಃ

ದಿಃ **04.11.2022**

(ಪೂಜಾ ಬೆಳಕೇರಿ)
ಅಪರ ಸಿವಿಲ್ ನ್ಯಾಯಾಧೀಶರು ಹಾಗೂ
ದಂಢಾಧಿಕಾರಿಗಳು, ಹುಣಸೂರು.